# ಹಚ್ಚೇವು ಜಾಗೃತಿಯ ಹಣತೆ




## ವಿಶ್ವ ಆರೋಗ್ಯ ಸಂಸ್ಥೆಯ 2019ರ ಘೋಷಣಾ ವಾಕ್ಯ

'ಇದು ಸಮಯ...! ಕ್ಷಯ ಮುಕ್ತ ವಿಶ್ವ ನಿರ್ಮಾಣಕ್ಕಾಗಿ' ಎನ್ನುವುದು ಕ್ಷಯರೋಗದ ಬಗ್ಗೆ 'ವಿಶ್ವ ಆರೋಗ್ಯ ಸಂಸ್ಥೆ'ಯ ಘೋಷಣೆ. ಈ ಕಾಣ್ಕೆಯ ಸಾಕಾರಕ್ಕಾಗಿ ಇಡೀ ಮಾನವ ಸಮುದಾಯ ದೃಢ ಸಂಕಲ್ಪ ಮತ್ತು ವಿಶ್ವಾಸಗಳಿಂದ ಸಾಗಬೇಕಾಗಿದೆ.

## ಆಂದೋಲನದ ರೂಪರೇಷೆಗಳು

- ಆಂದೋಲನ ಹಮ್ಮಿಕೊಳ್ಳುವ ಒಟ್ಟು ಜಿಲ್ಲೆಗಳು: 30 ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
- ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ಭೌಗೋಳಿಕವಾಗಿ ದುರ್ಬಲ ವರ್ಗಗಳ ಒಟ್ಟು ಸಮೀಕ್ಷಾ ಜನಸಂಖ್ಯೆ: 11432021
- ಆಂದೋಲವನ್ನು ಯಶಸ್ವಿಗೊಳಿಸಲು ಹಾಗೂ ಮೇಲಿನ ಸ್ಥಳಗಳಿಗೆ ಭೇಟಿ ನೀಡುವ ಒಟ್ಟು ತಂಡಗಳು: 16999
- ತಂಡಗಳಲ್ಲಿರುವ ಒಟ್ಟು ಸದಸ್ಯರ ಸಂಖ್ಯೆ: 39769

ಜಾಗತಿಕ ಆರೋಗ್ಯ ನಕಾಶೆಯ ಕಪ್ಪು ಚುಕ್ಕೆಗಳಲ್ಲಿ ಕ್ಷಯರೋಗವೂ ಒಂದು. ವಿಶ್ವದೆಲ್ಲೆಡೆ ಕ್ಷಯರೋಗದ ನಿರ್ಮೂಲನೆಯ ವಿರುದ್ಧ ಆಂದೋಲನಗಳು ನಡೆಯುತ್ತಿದ್ದರೂ, ಈಗಲೂ ಜಗತ್ತನ್ನು ಬಾಧಿಸುತ್ತಿರುವ ಪ್ರಮುಖ ಸಾರ್ವಜನಿಕ ಆರೋಗ್ಯ ಸಮಸ್ಯೆಗಳಲ್ಲಿ ಕ್ಷಯರೋಗವೂ ಒಂದಾಗಿದೆ. ಪ್ರಪಂಚದಲ್ಲಿರುವ ಕ್ಷಯರೋಗಿಗಳಲ್ಲಿ ಸರಿಸುಮಾರು ನಾಲ್ಕನೇ ಒಂದು ಭಾಗಕ್ಕಿಂತಲೂ ಹೆಚ್ಚು ರೋಗಿಗಳು ಭಾರತದಲ್ಲೇ ಇದ್ದಾರೆ ಎನ್ನುವುದು ಸಮಸ್ಯೆಯ ಸಂಕೀರ್ಣತೆಯನ್ನು ಸೂಚಿಸುವಂತಿದೆ.

ಭಾರತ ವಿಶ್ವದಲ್ಲೇ ಹೆಚ್ಚು ಕ್ಷಯರೋಗಿಗಳನ್ನು ಹೊಂದಿರುವ ದೇಶ. 'ವಿಶ್ವ ಆರೋಗ್ಯ ಸಂಸ್ಥೆ'ಯ 2018ರ ವರದಿಯ ಅಂಕಿಅಂಶಗಳ ಪ್ರಕಾರ, 10 ಮಿಲಿಯನ್ ಕ್ಷಯರೋಗಿಗಳು ವಿಶ್ವದಲ್ಲಿದ್ದು, ಅವರಲ್ಲಿ 27.4 ಲಕ್ಷಕ್ಕೂ ಹೆಚ್ಚು ಕ್ಷಯರೋಗಿಗಳು ಭಾರತದಲ್ಲಿಯೇ ಇದ್ದಾರೆ. ಈ ರೋಗದ ದುಷ್ಪರಿಣಾಮವನ್ನು ಆರೋಗ್ಯ ಕ್ಷೇತ್ರದ ಮೇಲೆ ಮಾತ್ರವಲ್ಲದೆ, ಸಾಮಾಜಿಕ ಹಾಗೂ ಆರ್ಥಿಕ ವಲಯಗಳಲ್ಲಿ ಕೂಡ ಕಾಣಬಹುದು.

ಕರ್ನಾಟಕದಲ್ಲಿ ಕೂಡ ಕ್ಷಯ ರೋಗಿಗಳ ಸಂಖ್ಯೆ ಗಣನೀಯವಾಗಿಯೇ ಇದೆ. 'ನಿಕ್ಷಯ್' ಅಂಕಿಅಂಶಗಳ ಪ್ರಕಾರ 2018ರಲ್ಲಿ ಕರ್ನಾಟಕದಲ್ಲಿ ದಾಖಲಾಗಿರುವ ಕ್ಷಯರೋಗಿಗಳ ಸಂಖ್ಯೆ 82,500.

### ಗಾಳಿಯ ಮೂಲಕ ರೋಗಸಂಚಾರ

ಕ್ಷಯರೋಗ 'ಮೈಕೋ ಬ್ಯಾಕ್ಟೀರಿಯಂ ಟ್ಯೂಬರ್‌ಕ್ಯುಲೋಸಿಸ್' ಎಂಬ ರೋಗಾಣುವಿನಿಂದ ಹರಡುವ ಕಾಯಿಲೆ. ಈ ರೋಗಾಣು ಗಾಳಿಯ ಮೂಲಕ ಹರಡುವುದು. ಕ್ಷಯದ ಸೋಂಕು ಶ್ವಾಸಕೋಶವನ್ನು ಹೆಚ್ಚಾಗಿ ಬಾಧಿಸುತ್ತದೆ. ಕೂದಲು ಮತ್ತು ಉಗುರನ್ನು ಬಿಟ್ಟರೆ ದೇಹದ ಯಾವುದೇ ಭಾಗಕ್ಕೂ ಈ ರೋಗ ತಗುಲಬಹುದು. ಅನಾರೋಗ್ಯದ ಲಕ್ಷಣಗಳು ಕಾಣಿಸಿಕೊಂಡ ತಕ್ಷಣವೇ ತಪಾಸಣೆಗೆ ಒಳಗಾಗಿ ರೋಗ ಪತ್ತೆಯಾಗಿ, ಚಿಕಿತ್ಸೆ ಪ್ರಾರಂಭವಾಗಿಬಿಟ್ಟರೆ ಕ್ಷಯವನ್ನು ಸಂಪೂರ್ಣವಾಗಿ ಗುಣಪಡಿಸುವುದು ಸಾಧ್ಯವಿದೆ.

ಕರ್ನಾಟಕದಲ್ಲಿ ಪರಿಷ್ಕೃತ 'ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ' 1997ರಿಂದ ಜಾರಿಯಲ್ಲಿದೆ. ಸಂಪೂರ್ಣ